ಬಂದುಹೋಗುತ್ತಿದ್ದ. ಮೂವರು ನಾದಿನಿಯರಿಗೂ ಐದಾರು ವರ್ಷಗಳ ಅಂತರದಲ್ಲಿ, ಒಬ್ಬೊಬ್ಬರಿಗೂ ಒಳ್ಳೊಳ್ಳೆಯ ಸಂಬಂಧ ಹುಡುಕಿ ಮದುವೆ ಮಾಡಿಕೊಟ್ಟಳು. ಕಷ್ಟ ಸಾಗರದಲ್ಲಿ ತೊಯ್ದಾಡುತ್ತಿದ್ದ ನಾವಿಕನಿಲ್ಲದ ದೋಣಿಯನ್ನು ಅಂತೂ ಪಾರ್ವತಮ್ಮನು ಏಕಾಂಗಿಯಾಗಿ ದಡ ಸೇರಿಸಿದಳು. ಇಷ್ಟಕ್ಕೇ ಪಾರ್ವತಿಯ ಕಷ್ಟಗಳು ಮುಗಿಯಲಿಲ್ಲ. ಗಂಡನ ಮನೆಯಲ್ಲಿದ್ದ ಕಷ್ಟಗಳ ಮಹಾಸಾಗರವನ್ನು ದಾಟಿ ಇನ್ನೇನು ನೆಮ್ಮದಿಯಾಗಿರಬಹುದು ಎಂದುಕೊಳ್ಳುತ್ತಿರುವಾಗಲೇ ಪಾರ್ವತಿಗೆ ಎರಡು ಗಂಡು ಮತ್ತು ಒಬ್ಬ ಮಗಳನ್ನು ಕೊಟ್ಟ ನಂಜಯ್ಯನು, ಒಂದು ದಿನ ಎದೆನೋವು ಎಂದು ಕುಳಿತಲ್ಲಿಯೇ ಅಸುನೀಗಿದ್ದ. ಈಗ ಗಂಡನ ಸಹಾಯವಿಲ್ಲದೆ ವ್ಯವಸಾಯವನ್ನು ಮಾಡಿಸುವ ಮತ್ತು ಮೂವರು ಪುಟ್ಟಮಕ್ಕಳನ್ನು ಬೆಳೆಸುವ ಜವಾಬ್ದಾರಿಯೂ ಪಾರ್ವತಮ್ಮನ ಹೆಗಲ ಮೇಲೆ ಬಿತ್ತು.

ಪಾರ್ವತಿಯ ಮೂವರು ಮಕ್ಕಳೂ ಓದಿನಲ್ಲಿ ಅಷ್ಟೇನೂ ಆಸಕ್ತಿ ತೋರಿಸದೆ ತಾಯಿಗೆ ಹೊಲದಲ್ಲಿ ಸಹಾಯ ಮಾಡುತ್ತಾ, ಕ್ರಮೇಣ ವ್ಯವಸಾಯದಲ್ಲಿ ಆಸಕ್ತಿ ಬೆಳೆಸಿಕೊಂಡರು. ಆದರೂ ಮೂವರು ಮಕ್ಕಳನ್ನು ಬಲವಂತದಿಂದ ಶಾಲೆಗೆ ಕಳುಹಿಸಿ ತಾನು ಕೂಲಿಯವರನ್ನು ಇಟ್ಟುಕೊಂಡು ವ್ಯವಸಾಯವನ್ನು ಮಾಡಿಸುತ್ತಾ, ಸಂಸಾರವನ್ನು ನಡೆಸತೊಡಗಿದಳು. ಕಷ್ಟಗಳು ಬೆಟ್ಟದಂತೆ ಎದುರಾದಂತೆಲ್ಲಾ ಪಾರ್ವತಮ್ಮ ಮತ್ತಷ್ಟು ಗಟ್ಟಿಯಾಗುತ್ತಾ ಹೋದಳು. ವರ್ಷಗಳು ಉರುಳಿದಂತೆ ಮಕ್ಕಳು ದೊಡ್ಡವರಾಗುತ್ತಾ ಬಂದರು. ಹೈಸ್ಕೂಲಿನವರೆಗೆ ಓದಿದ ನಂತರ ಕಾಲೇಜಿಗೆ ಹೋಗದೆ ಪೂರ್ತಿ ವ್ಯವಸಾಯಕ್ಕಿಳಿದರು. ಇದ್ದ ಒಬ್ಬಳೇ ಮಗಳನ್ನು ಅಲ್ಲಿಂದ ಐವತ್ತು ಮೈಲಿ ದೂರದಲ್ಲಿ ನೆಲೆಸಿದ್ದ ಸಂಬಂಧಿಕರ ಹುಡುಗನೊಬ್ಬನಿಗೆ ಮದುವೆ ಮಾಡಿಕೊಟ್ಟಳು. ಆ ಮಗಳ ಮಗನೇ ಈ ಶಂಕರ. ತನ್ನ ಇಬ್ಬರು ಗಂಡು ಮಕ್ಕಳಿಗೂ ಮದುವೆ ಮಾಡಿದ ಪಾರ್ವತಮ್ಮನು ತನ್ನ ಜವಾಬ್ದಾರಿಯನ್ನು ಅಂತೂ ಮುಗಿಸಿಕೊಂಡಳು. ಪಾರ್ವತಮ್ಮನ ಗಂಡುಮಕ್ಕಳಿಬ್ಬರಿಗೂ ತಲಾ ಎರಡೆರಡು ಮಕ್ಕಳು ಜನಿಸಿದರು. ಪಾರ್ವತಮ್ಮನ ಅ ಕಲ್ಲುಮನೆಗೆ ಸೊಸೆಯರು ಬಂದ ನಂತರ ಎಲ್ಲಾ ಕುಟುಂಬದಲ್ಲಿರುವಂತೆ ಭಿನ್ನಾಭಿಪ್ರಾಯಗಳು, ಸಣ್ಣಪುಟ್ಟ ಕಲಹಗಳೂ ಶುರುವಾಗಿದ್ದರಿಂದ ಪಾರ್ವತಮ್ಮನು ತನ್ನಿಬ್ಬರು ಗಂಡುಮಕ್ಕಳಿಗೂ ಮತ್ತು ಆಗಾಗ್ಗೆ ಬಂದು ಭಾಗ ಕೇಳುತ್ತಿದ್ದ ಮೈದುನನಿಗೂ ಸೇರಿಸಿ ತೋಟ, ಹೊಲ, ಗದ್ದೆಗಳನ್ನು ಭಾಗ ಮಾಡಿಕೊಟ್ಟಳು. ತೋಟದ ಹತ್ತಿರ ಇದ್ದ ದೊಡ್ಡ ಮಾವಿನ ಮರ ಮತ್ತು ಹತ್ತು ತೆಂಗಿನ ಮರಗಳನ್ನು ಪಾರ್ವತಮ್ಮ ಕೇಳಿ ತನ್ನ ಹೆಸರಿನಲ್ಲೇ ಇಟ್ಟುಕೊಂಡಳು.

ಪಾರ್ವತಮ್ಮನ ಯೋಗಕ್ಷೇಮವನ್ನು ಇಬ್ಬರು ಮಕ್ಕಳೂ ನೋಡಿಕೊಳ್ಳುವುದೆಂದು ತೀರ್ಮಾನವಾಯಿತು. ಅವಳ ಪಾಲಿಗೆ ಬಂದಿದ್ದ ದೊಡ್ಡ ಮಾವಿನ ಮರ ಮತ್ತು ತೆಂಗಿನ ಗಿಡಗಳಿಂದ ಬಂದ ಫಲವನ್ನು ಮಕ್ಕಳು ಮತ್ತು ಮೊಮ್ಮಕ್ಕಳು ತಿಂದು ಉಳಿದಿದ್ದನ್ನು ಮಾರಿ ಬಂದ ಹಣದಿಂದ ಮಗಳಿಗೆ ಕುಂಕುಮದ ಖರ್ಚು ಮತ್ತು ಮೊಮ್ಮಕ್ಕಳಿಗೆ ಬಟ್ಟೆಬರೆ, ತಿನಿಸು ಕೊಡಿಸಲು ಹಾಗೂ ತನ್ನ ಮೇಲು ಖರ್ಚಿಗೆ ಇಟ್ಟುಕೊಳ್ಳುತ್ತಿದ್ದಳು. ತಾನೇ ಕಟ್ಟಿಸಿದ್ದ ದೊಡ್ಡ ಮನೆಯನ್ನು ಇಬ್ಬರು ಗಂಡು ಮಕ್ಕಳಿಗೆ ಮಧ್ಯಕ್ಕೆ ಗೋಡೆ ಹಾಕಿ ಸಮಾನವಾಗಿ ಭಾಗ ಮಾಡಿಕೊಟ್ಟಳು. ನಂತರ ಪಾರ್ವತಮ್ಮ ಆರು ತಿಂಗಳು ಒಬ್ಬೊಬ್ಬ ಮಗನ ಮನೆಯಲ್ಲಿ ವಾಸಿಸತೊಡಗಿದಳು. ಹಿಂದೆಲ್ಲಾ ಕುಟುಂಬದ ಸರ್ವ ಸದಸ್ಯರ ಜಗಳಗಳನ್ನು ತನ್ನ ಬುದ್ಧಿವಂತಿಕೆ, ಮಾತುಗಾರಿಕೆಯಿಂದ ಬಗೆಹರಿಸಿ, ಕೂಡು ಕುಟುಂಬವನ್ನು ಒಟ್ಟಿಗೆ ಇಟ್ಟುಕೊಂಡಿದ್ದ ಪಾರ್ವತಮ್ಮ ಈಗ ತನಗೆ ಹುಟ್ಟಿರುವ ಇಬ್ಬರು ಗಂಡುಮಕ್ಕಳು ಮತ್ತು ಸೊಸೆಯಂದಿರ ಜಗಳಗಳನ್ನು ಪರಿಹರಿಸಲಾಗದೆ ಸೋತು, ಮನೆ ಮತ್ತು ಆಸ್ತಿಯನ್ನು ಭಾಗ ಮಾಡಬೇಕಾಯಿತು. 'ಈಗ ಕಾಲ ಬದಲಾಗಿದೆ, ನಿಮ್ಮ ಮಾತು ಕೇಳ್ಕೊಂಡು ಬಿದ್ದಿರೋ ಕಾಲ ಹೋಯ್ತು' ಎಂದು ಒಮ್ಮೆ ಕಿರಿಯ ಸೊಸೆ, ಪಾರ್ವತಮ್ಮನಿಗೇ ದಬಾಯಿಸಿದ ನಂತರ ಪಾರ್ವತಮ್ಮ ಯಾರಿಗೂ ಹೆಚ್ಚು ಬುದ್ಧಿ ಹೇಳುವುದಾಗಲೀ, ನ್ಯಾಯ ಮಾಡುವುದಾಗಲೀ ಮಾಡುತ್ತಿರಲಿಲ್ಲ. ಮನೆಯ, ಆಸ್ತಿಯ ಸಕಲ ಜವಾಬ್ದಾರಿಯನ್ನು ಮಕ್ಕಳಿಗೆ ಸೊಸೆಯಂದಿರಿಗೆ ವಹಿಸಿ, ತಾನು ಮೊಮ್ಮಕ್ಕಳ ಜೊತೆಗೆ ತನ್ನ ಜಗತ್ತನ್ನು ಕಂಡುಕೊಳ್ಳತೊಡಗಿದಳು. ಆಗಾಗ್ಗೆ ಮಗಳ ಮನೆಗೂ ಹೋಗಿ ಬರುತ್ತಿದ್ದಳು.